

## ರಂಜನೆಗೆ ಸಿದ್ಧಸೂತ್ರ

ಯೇತಿಯ ಪರಿಕಲ್ಪನೆಯನ್ನು ಬಳಸಿಕೊಂಡು ಅನೇಕ ಚಲನಚಿತ್ರಗಳು, ಸಾಕ್ಷ್ಯಚಿತ್ರಗಳು ಹಾಗೂ ವಿಡಿಯೊ ಗೇಮ್‌ಗಳು ರೂಪುಗೊಂಡಿವೆ. ಯೇತಿಯ ರೂಪವನ್ನು ಆಧರಿಸಿದ 'ಟಿನ್ ಟಿನ್ ಕಾಮಿಕ್ಸ್'ಗಳು ಚಿಣ್ಣರ ಮನಗೆದ್ದಿವೆ.

'ಸ್ನೋ ಬೀಸ್ಟ್', 'ನೈಟ್ ಆಫ್ ದಿ ಹೌಲಿಂಗ್ ಬೀಸ್ಟ್', 'ದಿ ಸ್ನೋ ಕ್ರಿಯೇಚರ್', 'ರೇಜ್ ಆಫ್ ದಿ ಯೇತಿ', 'ಅಬೊಮಿನಬಲ್', 'ದೊ ಅಬೊಮಿನಬಲ್ ಸ್ನೋಮ್ಯಾನ್ ಆಫ್ ದಿ ಹಿಮಾಲಯಾಸ್', 'ಬಿಗ್‌ಫೂಟ್' – ಹೀಗೆ ಯೇತಿ ಅಥವಾ ಯೇತಿಯನ್ನು ಹೋಲುವಂತಹ ದೈತ್ಯಪ್ರಾಣಿಗಳನ್ನು ಕೇಂದ್ರವಾಗುಳ್ಳ ಅನೇಕ ಚಲನಚಿತ್ರಗಳು ರೂಪುಗೊಂಡಿವೆ. ಮಕ್ಕಳನ್ನು ಕೇಂದ್ರವಾಗಿಟ್ಟು ಯೇತಿಯ ಹೆಸರಿನಲ್ಲಿ ರೂಪುಗೊಂಡಿರುವ ಅನೇಕ ಆಟಗಳು ಅಂತರ್ಜಾಲದಲ್ಲಿ ಲಭ್ಯ.

'ದಿ ಅಬೊಮಿನಬಲ್ ಸ್ನೋಮ್ಯಾನ್' ಎನ್ನುವ ಸಾಕ್ಷ್ಯಚಿತ್ರ ಯೇತಿಗಳ ಕುರಿತು ಹೆಚ್ಚಿನ ಮಾಹಿತಿ ನೀಡುತ್ತದೆ. ಆ ಸಾಕ್ಷ್ಯಚಿತ್ರವನ್ನು ನೋಡಲು ಬಳಸಬೇಕಾದ ಕೊಂಡಿ: bit.ly/2H0Sim3